MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 | ENGLISH DAILY | Subscription Yearly - Rs. - | WEDNESDAY | 3-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದ ಪಾಮೆಣ್ಣೆ ಆಮದು ಎಪ್ರಿಲ್‌ನಲ್ಲಿ 14 ತಿಂಗಳ ಕನಿಷ್ಠ ಮಟ್ಟಕ್ಕೆ

ಎಪ್ರಿಲ್ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು ಹಿಂದಿನ ತಿಂಗಳಿಗಿಂತ 30 ಶೇಕಡಾ ಇಳಿಕೆಯಾಗಿ ಹಿಂದಿನ 14 ತಿಂಗಳ ಕನಿಷ್ಠ ಮಟ್ಟಕ್ಕಿಳಿದು ಮಾರ್ಚ ತಿಂಗಳ 728,530 ಟನ್‌ಗಳಿಂದ 508,000 ಟನ್‌ಗಳಿಗಿಳಿದಿದೆಯೆಂದು ಡೀಲರ್‌ಗಳು ಸರಾಸರಿ ಅಂದಾಜಿಸಿದ್ದಾರೆಂದು ರಾಯ್ಟರ್ಸ್ ಹೇಳಿದೆ. ಖರೀದಿದಾದರು ಪರ್ಯಾಯ ಖಾದ್ಯತೈಲಗಳ ಖರೀದಿ ಹೆಚ್ಚಳಗೊಳಿಸಿ ಪಾಮೆಣ್ಣೆ ಖರೀದಿ ಕಡಿಮೆ ಮಾಡಿದ್ದಾರೆನ್ನಲಾಗಿದೆ. ಸೂರ್ಯಕಾಂತಿ ಎಣ್ಣೆ ಆಮದು 69 ಶೇಕಡಾ ಹೆಚ್ಚಳದೊಂದಿಗೆ 250,000 ಟನ್‌ಗಳಾಗಬಹುದೆನ್ನಲಾಗಿದ್ದು, ಸೋಯಾಬೀನ್ ಎಣ್ಣೆ ಆಮದು 2.3 ಶೇಕಡಾ ಹೆಚ್ಚಳದೊಂದಿಗೆ 258,925 ಟನ್‌ಗಳಾಗಬಹುದೆನ್ನಲಾಗಿದೆ. ಜಾಗತಿಕ ಖಾದ್ಯತೈಲ ಆಮದಿನಲ್ಲಿ ಭಾರತದ ಪಾಲು ಎಪ್ರಿಲ್‌ನಲ್ಲಿ 50 ಶೇಕಡಾ ಕ್ಕಿಂತ ಕೆಳಗಿಳಿಯಲಿದೆಯೆನ್ನಲಾಗಿದ್ದು, ಇದು ಜುಲೈ 2022 ರ ನಂತರ ಪ್ರಥಮ ಬಾರಿಯಾಗಿದೆಯೆನ್ನಲಾಗಿದೆ. ಇಂದಿನ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಅಲ್ಪಮಟ್ಟಿನ ಇಳಿಕೆಯಾಗಿದೆಯೆನ್ನಲಾಗಿದೆ.

## ಜಾಗತಿಕ ಬಳಕೆ ಇಳಿಕೆಯಿಂದ ಭಾರತದ ಗೋಡಂಬಿ ರಫ್ತು 20 ಶೇಕಡಾ ಇಳಿಕೆ

2022-23 ರಲ್ಲಿ ಭಾರತದ ಗೋಡಂಬಿ ತಿರುಳು ರಫ್ತು 21 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷದ 75450 ಟನ್‌ಗಳಿಂದ 59581 ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಜಾಗತಿಕ ಆರ್ಥಿಕ ಕುಸಿತದಿಂದ ಗೋಡಂಬಿ ತಿರುಳಿಗೆ ಜಾಗತಿಕ ಬೇಡಿಕೆ ಇಳಿಕೆಯಿಂದ ರಫ್ತು ಇಳಿಕೆಯಾಗಿದೆಯೆನ್ನಲಾಗಿದೆ. ದೇಶೀ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ಗೋಡಂಬಿ ದರವೂ ಇಳಿಕೆಯಾಗುತ್ತಿದೆ.

## ರಾಜಕೋಟ್, ದಾಹೋಡ್‌ನಲ್ಲಿ ಬೇಸಿಗೆ ಬೆಳೆಯ ಹೆಸರುಕಾಳು ಆವಕ ಆರಂಭ

ರಾಜಕೋಟ್ ಹಾಗೂ ದಾಹೋಡ್ ಮಾರುಕಟ್ಟೆಯಲ್ಲಿ ಹೊಸ ಬೆಳೆಯ ಬೇಸಿಗೆ ಬೆಳೆಯ ಹೆಸರುಕಾಳು ಆವಕ ಆರಂಭವಾಗಿದೆಯೆನ್ನಲಾಗಿದೆ.

## ಕಾಳುಮೆಣಸು ದರ ಸ್ವಲ್ಪ ಹೆಚ್ಚಳ ಸಾಧ್ಯತೆ

ಕಾಳುಮೆಣಸು ದರ ಸ್ವಲ್ಪ ಹೆಚ್ಚಳ ಸಾಧ್ಯತೆ ಇದೆಯಿದೆಯೆನ್ನಲಾಗಿದೆ. ಆದರೆ ದಾಸ್ತಾನು ಹೆಚ್ಚಳವಿರುವುದರಿಂದ ಹೆಚ್ಚು ದರ ಹೆಚ್ಚಳದ ನಿರೀಕ್ಷೆಯಿಲ್ಲವೆನ್ನಲಾಗಿದೆ. ದಾಸ್ತಾನು ಇಳಿಕೆಯ ನಂತರ ದರ ಹೆಚ್ಚಳವಾಗುವ ಸಾಧ್ಯತೆಯಿದೆ.

## ಕಾಫಿ ದರ ಸ್ವಲ್ಪ ಹೆಚ್ಚಳ

ದುರ್ಬಲ ಡಾಲರ್ ವಿನಿಮಯ ದರದಿಂದ ಅರೆಬಿಕಾ ಹಾಗೂ ರಾಬೆಸ್ಟಾ ಕಾಫಿ ದರಗಳೂ ಸ್ವಲ್ಪ ಹೆಚ್ಚಳ ಕಂಡಿದೆಯೆನ್ನಲಾಗಿದೆ. ಬ್ರೆಜಿಲ್‌ನಲ್ಲಿ ಮಳೆಯಿಂದ ಕಟಾವು ವಿಳಂಬವಾಗಬಹುದೆನ್ನಲಾಗಿದೆ.

## ಬ್ಯಾಡಗಿ ಮೆಣಸಿನಕಾಯಿ ಆವಕ ಸ್ವಲ್ಪ ಹೆಚ್ಚಳ

ಮಾರುಕಟ್ಟೆಗಳಿಗೆ ಹೊಸಬೆಳೆಯ ಬ್ಯಾಡಗಿ ಮೆಣಸಿನಕಾಯಿ ಆವಕ ಸ್ವಲ್ಪ ಮಟ್ಟಿನ ಹೆಚ್ಚಳ ಕಂಡಿದೆಯೆನ್ನಲಾಗಿದ್ದು, ದರ ಸ್ವಲ್ಪ ಮಟ್ಟಿನ ಇಳಿಕೆಯಾಗಿದೆಯೆನ್ನಲಾಗಿದೆ.